ಕರ್ನಾಟಕ ಸರ್ಕಾರ
# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
**ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23**

---

**ಸಂಖ್ಯೆ: ಪಿಆರ್ಎಂ/126/2022-23** **ದಿನಾಂಕ: 05-11-2022**

**: ಸುತ್ತೋಲೆ :**

**ವಿಷಯ:-** 2022-23ನೇ ಸಾಲಿನ 2ನೇ ವರ್ಷದ ಬಿ-ಫಾರ್ಮ ಪದವಿ ವ್ಯಾಸಂಗಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ಇಲಾಖೆಗಳ ಸೇವಾ ನಿರತ ಹಿರಿಯ ಫಾರ್ಮಾಸಿ ಅಧಿಕಾರಿ ಮತ್ತು ಫಾರ್ಮಾಸಿ ಅಧಿಕಾರಿ ರವರಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:-** ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಔನಿಇ/ಸಔವಿಮವಿ/ವಿವಿ-2/03/202-23 ದಿನಾಂಕ: 21-10-2022, ಸ್ವೀಕೃತ ದಿನಾಂಕ: 31/10/2022

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ನಿದೇಶನಾಲಯ ಮತ್ತು ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಈ ಇಲಾಖೆಗಳಿಂದ ಅನ್ಯಪರ ಸೇವೆಯ ಮೇಲೆ ಅಥವಾ ಪ್ರತಿ ನಿಯೋಜನೆಯ ಮೇರೆಗೆ ಇತರ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ಹಿರಿಯ ಫಾರ್ಮಾಸಿ ಅಧಿಕಾರಿ ಮತ್ತು ಫಾರ್ಮಾಸಿ ಅಧಿಕಾರಿಗಳಿಂದ 2022-23ನೇ ಸಾಲಿನ 2ನೇ ವರ್ಷದ ಬಿ.ಫಾರ್ಮ ಪದವಿ ವ್ಯಾಸಂಗಕ್ಕೆ ಲ್ಯಾಟರೆಲ್ ಪ್ರವೇಶದ ಆಯ್ಕೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಸುತ್ತೋಲೆಯನ್ನು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು, ನಿಯಂತ್ರಣಾಧಿಕಾರಿಗಳು ಮತ್ತು ಕಛೇರಿ ಮುಖ್ಯಸ್ಥರು ಅವರ ಅಧೀನ ಕಛೇರಿ-ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಹಿರಿಯ ಫಾರ್ಮಸಿ ಅಧಿಕಾರಿ ಮತ್ತು ಫಾರ್ಮಸಿ ಅಧಿಕಾರಿಗಳ ಗಮನಕ್ಕೆ ತರಲು ತಿಳಿಸಿದೆ. ಬಿ.ಫಾರ್ಮ ವ್ಯಾಸಂಗದ ಪ್ರವೇಶಕ್ಕೆ ಸಲ್ಲಿಸಬೇಕಾಗಿರುವ ನಿಗದಿತ ಅರ್ಜಿ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ಸೇವಾನಿರತ ನೌಕರರು ಸದರಿ ಅರ್ಜಿಯನ್ನು ಭರ್ತಿ ಮಾಡಿ ಸಮುಚಿತ ಮಾರ್ಗದ ಮೂಲಕ ಆಯ್ಕೆ ಸಮಿತಿಗೆ ಸಲ್ಲಿಸಲು ತಿಳಿಸಿದೆ. ನೇರವಾಗಿ ಅಥವಾ ಮುಂಗಡವಾಗಿ ಸಲ್ಲಿಸುವ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಈ ಕೆಳಕಂಡ ಅರ್ಹತೆಗಳನ್ನು ಹೊಂದಿರುವ ಸೇವಾ ನಿರತ ಹಿರಿಯ ಫಾರ್ಮಸಿ ಅಧಿಕಾರಿ ಮತ್ತು ಫಾರ್ಮಸಿ ಅಧಿಕಾರಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಅನರ್ಹ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಿಕೊಡತಕ್ಕದ್ದಲ್ಲ.

1) 2ನೇ ವರ್ಷದ ಬಿ.ಫಾರ್ಮ ಪದವಿ ವ್ಯಾಸಂಗದ ಲ್ಯಾಟರೆಲ್ ಪ್ರವೇಶಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಎಲ್ಲಾ ವರ್ಗದ ಅಭ್ಯರ್ಥಿಗಳು 48 ವರ್ಷಗಳ ವಯೋಮಿತಿಯನ್ನು ಮೀರಿರಬಾರದು.
2) ಡಿ-ಫಾರ್ಮಾ ಪರೀಕ್ಷೆಯಲ್ಲಿ (ಪ್ರಥಮ ಮತ್ತು ದ್ವಿತೀಯ ಭಾಗ-1 ಮತ್ತು 2 ರಲ್ಲಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನೂ ಸೇರಿ ಎಲ್ಲಾ ವರ್ಗದ ಅಭ್ಯರ್ಥಿಗಳು ಸರಾಸರಿ (ಅಗ್ರಿಗೇಟ್) ಕನಿಷ್ಠ ಶೇಕಡ 40 ರಷ್ಟು ಅಂಕ ಪಡೆದಿರಬೇಕು.
3) ಖಾಯಂಪೂರ್ವ ಸೇವಾವಧಿಯು ಘೋಷಣೆಯಾಗಿರಬೇಕು ಹಾಗೂ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಖಾಯಂಪೂರ್ವ ಸೇವಾವಧಿಯು ಸೇರಿದಂತೆ ಅಭ್ಯರ್ಥಿಯು 05 ವರ್ಷಗಳ ನಿರಂತರ ಸೇವೆಯನ್ನು (ರೆಗ್ಯುಲರ್ ಸರ್ವೀಸ್) ಪೂರೈಸಿರಬೇಕು.

4) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಗಧಿತ ಪ್ರಮಾಣದಲ್ಲಿ ಸ್ಥಾನವನ್ನು ಮೀಸಲಿಡಲಾಗುವುದು

5) ನೌಕರರ ಬಗ್ಗೆ ಇಲಾಖಾ ವಿಚಾರಣೆ / ಕ್ರಿಮಿನಲ್ ಮೊಕದ್ದಮೆ ಬಾಕಿ ಇಲ್ಲದಿರುವ ಬಗ್ಗೆ ಕಛೇರಿ ಮುಖ್ಯಸ್ಥರಿಂದ ದೃಡೀಕರಣ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು.

6) 2ನೇ ವರ್ಷದ ಬಿ-ಫಾರ್ಮಾ ಪದವಿ ವ್ಯಾಸಂಗದ ಆಯ್ಕೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ (1)ರ ಪರಿಚ್ಛೇಧ 2ಎ(1) ಮತ್ತು (2) ರನ್ವಯ ಅರ್ಹರಾಗಿರುವಂತಹ ಫಾರ್ಮಾಸಿ ಅಧಿಕಾರಿಗಳು ಅವರ ಮೇಲಾಧಿಕಾರಿಗಳ ಮೂಲಕವೇ ಅರ್ಜಿ ಸಲ್ಲಿಸತಕ್ಕದ್ದು.

7) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಬೇರೆ ಇಲಾಖೆ/ ಸಂಸ್ಥೆಗಳಿಗೆ ನಿಯೋಜನೆಗೊಂಡು ಅದೇ ಇಲಾಖೆ / ಸಂಸ್ಥೆಗಳಲ್ಲಿ ವಿಲೀನಗೊಂಡಿರುವ ನೌಕರರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

8) 2ನೇ ವರ್ಷದ ಬಿ-ಫಾರ್ಮಾ ವ್ಯಾಸಂಗಕ್ಕೆ ಆಯ್ಕೆಯಾದ ನೌಕರರು ಬಿ-ಫಾರ್ಮಾ ಕೋರ್ಸಿಗೆ ಪ್ರವೇಶ ಪಡೆದ ನಂತರ ವ್ಯಾಸಂಗದ ಅವಧಿಯನ್ನು ಪೂರ್ಣಗೊಳಿಸಬೇಕು. ಒಂದು ವೇಳೆ ಕೋರ್ಸ್‌ನ್ನು ಅಪೂರ್ಣಗೊಳಿಸಿದ್ದಲ್ಲಿ ಅಥವ ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಕೆ.ಸಿ.ಎಸ್.ಆರ್. ನಿಯಮಾವಳಿ ಪ್ರಕಾರ ವ್ಯಾಸಂಗದ ಅವಧಿಯಲ್ಲಿ ಪಡೆದಿರುವ ವ್ಯಾಸಂಗ ಶುಲ್ಕ, ವೇತನ ಹಾಗೂ ಇತರ ಭತ್ಯೆಗಳನ್ನು ಸರ್ಕಾರಕ್ಕೆ ಮರುಪಾವತಿಸುವ ಷರತ್ತಿಗೊಳಪಟ್ಟಿರುತ್ತದೆ. ಅಲ್ಲದೇ, ಅಂತಹ ನೌಕರರು ಮುಂದೆ ಈ ಉನ್ನತ ವ್ಯಾಸಂಗಕ್ಕೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗುತ್ತಾರೆ.

9) ಅನಧಿಕೃತ ಗೈರುಹಾಜರಿಯಾಗಿರುವ, ಅಮಾನತ್ತಿನಲ್ಲಿರುವ, ಸ್ಥಳೀಯ ಅಭ್ಯರ್ಥಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಫಾರ್ಮಾಸಿ ಅಧಿಕಾರಿಗಳ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಕಳುಹಿಸತಕ್ಕದ್ದಲ್ಲ.

2022-23ನೇ ಸಾಲಿನ 2ನೇ ವರ್ಷದ ಬಿ-ಫಾರ್ಮಾ ಪದವಿ ವ್ಯಾಸಂಗದ ಆಯ್ಕೆಗಾಗಿ ಸೇವಾನಿರತ ನೌಕರರು ಸಲ್ಲಿಸುವ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿರುವ ಪ್ರತಿಯೊಂದು ಮಾಹಿತಿಯನ್ನು ಕಛೇರಿ ಮುಖ್ಯಸ್ಥರು ಕೂಲಂಕುಷವಾಗಿ ಪರಿಶೀಲಿಸಿ, ಕ್ರಮಬದ್ಧವಾಗಿದ್ದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು **ದಿನಾಂಕ: 08/11/2022 ರ ಸಾಯಂಕಾಲ 5.00 ಗಂಟೆಯೊಳಗೆ ತಲುಪುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಹಾಗೂ ಪೀಠಸ್ಥರು, 2ನೇ ವರ್ಷದ ಬಿ-ಫಾರ್ಮಾ ಪದವಿ ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕೆ.ಆರ್.ರಸ್ತೆ, ಕೋಟೆ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆವರಣ, ಬೆಂಗಳೂರು-560002 ಅಥವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, 5ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23** ಇವರಿಗೆ ಸಲ್ಲಿಸುವುದು. ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿರುವ ಅವಧಿಯ ನಂತರ ಅಂಚೆ ಮೂಲಕವಾಗಲಿ ಅಥವಾ ಇನ್ನಾವುದೇ ರೀತಿಯಲ್ಲಾಗಲಿ ಸ್ವೀಕೃತ ಅರ್ಜಿಗಳನ್ನು ಹಾಗೂ ಕ್ರಮಬದ್ಧವಲ್ಲದ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಅರ್ಜಿಗಳನ್ನು ಕಳುಹಿಸುವಾಗ ಲಕೋಟೆಯ ಮೇಲೆ ಸ್ಪಷ್ಟವಾಗಿ ಮತ್ತು ದಪ್ಪ ಅಕ್ಷರಗಳಲ್ಲಿ "2022-23ನೇ ಸಾಲಿನ 2ನೇ ವರ್ಷದ ಬಿ.ಫಾರ್ಮಾ ಪದವಿ ವ್ಯಾಸಂಗದ ಆಯ್ಕೆಗಾಗಿ ಅರ್ಜಿ" ಎಂದು ನಮೂದಿಸಲು ತಿಳಿಸಲಾಗಿದೆ.

"ಕಛೇರಿ ಟಿಪ್ಪಣಿ ಪೀಠಸ್ಥರು, ಬಿ-ಫಾರ್ಮಾ ಪದವಿ ವ್ಯಾಸಂಗದ ಆಯ್ಕೆ ಸಮಿತಿ ಹಾಗೂ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರಿಂದ ಅನುಮೋದಿಸಲ್ಪಟ್ಟಿದೆ"

05/11/22

ಆಡಳಿತಾಧಿಕಾರಿಗಳು(ಸಾರಿಗೆ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ನಿರ್ದೇಶನಾಲಯ, ಬೆಂಗಳೂರು

ಪ್ರತಿಯನ್ನು:-

1) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

**ಪ್ರತಿಯನ್ನು ಈ ಕೆಳಕಂಡ ಅಧಿಕಾರಿಗಳಿಗೆ ಅವರುಗಳ ಅಧೀನದಲ್ಲಿ ಬರುವ ಅರ್ಹ ಸೇವಾನಿರತ ಫಾರ್ಮಾಸಿ ಅಧಿಕಾರಿ ಮತ್ತು ಹಿರಿಯ ಫಾರ್ಮಸಿ ಅಧಿಕಾರಿರವರ ಗಮನಕ್ಕೆ ತರಲು ಮತ್ತು ಅರ್ಜಿ ನಮೂನೆಯನ್ನು ಒದಗಿಸಲು ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ........................................
2) ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ........................................
3) ಡೀನ್ ಮತ್ತು ನಿರ್ದೇಶಕರು, ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು/ ಮೈಸೂರು/ಹುಬ್ಬಳ್ಳಿ/ಬಳ್ಳಾರಿ/ಬೆಳಗಾವಿ/ಶಿವಮೊಗ್ಗ/ಮಂಡ್ಯ/ಬೀದರ್/ಹಾಸನ/ಗುಲ್ಬರ್ಗಾ/ಚಾಮರಾಜನಗರ ಕೊಡಗು....
4) ವೈದ್ಯಕೀಯ ಅಧೀಕ್ಷಕರು, ಬೋಧನಾ ಆಸ್ಪತ್ರೆ, ..................................................................
5) ನಿರ್ದೇಶಕರು, ಮಿಂಟೋ ಕಣ್ಣಾಸ್ಪತ್ರೆ, ಬೆಂಗಳೂರು.
6) ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ಮೈಸೂರು/ಧಾರವಾಡ/ಹುಬ್ಬಳ್ಳಿ/ಮಂಗಳೂರು/ ಬೆಳಗಾಂ ಮತ್ತು ಗುಲ್ಬರ್ಗಾ.
7) ಅಧ್ಯಕ್ಷರು, ಕೆ.ಎಸ್.ಆರ್.ಟಿ.ಸಿ. ಬೆಂಗಳೂರು.
8) ಆರಕ್ಷಕ ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಕಾರಾಗೃಹ ಇಲಾಖೆ, ಹೊಸೂರು ರಸ್ತೆ, ಕೋರಮಂಗಲ, ಬೆಂಗಳೂರು.
9) ಪ್ರಾಂಶುಪಾಲರು, ಕೆ.ಎಸ್.ಆರ್.ಪಿ ಹಾಗೂ ಪಿ.ಟಿ.ಎಸ್. ಕೋರಮಂಗಲ, ಮೈಸೂರು ರಸ್ತೆ, ಬೆಂಗಳೂರು.
10) ಆರೋಗ್ಯಾಧಿಕಾರಿಗಳು, ಕೃಷ್ಣ ಮೇಲ್ದಂಡೆ ಯೋಜನೆ, ಆಲಮಟ್ಟಿ, ಬಿಜಾಪುರ.
11) ಪ್ರಾಂಶುಪಾಲರು, ದಂತ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.
12) ವೈದ್ಯಕೀಯ ಅಧೀಕ್ಷಕರು, ಕೆ.ಸಿ.ಜಿ. ಆಸ್ಪತ್ರೆ/ ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ/ ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ/ ಸಾರ್ವಜನಿಕ ಆಸ್ಪತ್ರೆ, ಜಯನಗರ/ ಸಾವ ್ಜನಿಕ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು.
13) ನಿರ್ದೇಶಕರು ಹಾಗೂ ಪೀಠಸ್ಥರು, ಬಿ. ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ.
14) ನಿರ್ದೇಶಕರು ಹಾಗೂ ಸದಸ್ಯರು, ಬಿ. ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ, ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ.
15) ಪ್ರಾಂಶುಪಾಲರು ಹಾಗೂ ಸದಸ್ಯರು, ಬಿ. ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ, ಸರ್ಕಾರಿ ಔಷಧ ಮಹಾವಿದ್ಯಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
16) ಉಪನಿರ್ದೇಶಕರು (ವೈ.ಶಿ.) ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ. ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕೆ.ಆರ್.ರಸ್ತೆ, ಕೋಟೆ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆವರಣ, ಬೆಂಗಳೂರು-560002 ಇವರಿಗೆ ಮಾಹಿತಿಗಾಗಿ.
17) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ, ಫಾರ್ಮಾಸಿಸ್ಟ್ ಸಂಘ, ಆಕುಕ ಸೇವೆಗಳ ನಿರ್ದೇಶನಾಲಯದ ಆವರಣ, ಬೆಂಗಳೂರು.
18) ಕಛೇರಿ ಪ್ರತಿ.